# ಜನಪದ ಪರಂಪರೆ ಮತ್ತು ಆಧುನಿಕ ಪ್ರಭಾವಗಳು

ರವಿಕುಮಾರ್ ಕೆ.ಎಂ.

ಕನ್ನಡ ಭಾಷಾ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಎಸ್. ಮಾದಾಪುರ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

DOI: https://doi.org/10.5281/zenodo.18775030

## ABSTRACT:

ಸಾಹಿತ್ಯ ಪ್ರಕಾರಗಳಲ್ಲಿಯೇ ಅತ್ಯಂತ ಪ್ರಾಚೀನ ಸಾಹಿತ್ಯ ಪ್ರಕಾರವೆಂದರೆ ಜನಪದ. ಇದರ ಮೂಲ ಜನರು. ಇವರು ರಚಿಸಿದ ಸಾಹಿತ್ಯವೇ ಜನಪದ ಸಾಹಿತ್ಯ. ಈ ಸಾಹಿತ್ಯ ಪರಂಪರೆ ಮನುಷ್ಯನಷ್ಟೇ ಪ್ರಾಚೀನವಾದದ್ದು. ಜನಪದ ಪರಂಪರೆ ಪ್ರತಿಹಂತದಲ್ಲಿಯೂ ಮನುಷ್ಯನೊಂದಿಗೆ ಬೆಳೆದು ಬಂದಿರುವಂತಹದ್ದು. ಜನಪದರ ಬದುಕು ಒಂದು ಕಲೆ. ಜನಪದರು ಜೀವನದ ಉತ್ಸಾಹ ಪಡೆಯಲು ದೈವಾರಾಧನೆಯ ಹಿನ್ನೆಲೆಯಲ್ಲಿ ಜನಪದ ಹಾಡು, ಲಾವಣಿ, ಒಗಟು, ಕುಣಿತಗಳನ್ನು ಮೈಗೂಡಿಸಿಕೊಂಡು ಈ ಪರಂಪರೆಯನ್ನು ಅಂದಿನಿಂದ ಇಂದಿನವರೆಗೂ ಮುಂದುವರೆಸಿಕೊಂಡು ಬಂದಿದ್ದಾರೆ. ಜನಪದರ ಬದುಕು ಒಂದು ವಿಶೇಷ. ತಮ್ಮ ನಿತ್ಯದ ದುಡಿಮೆಯ ಆಯಾಸ, ಬದುಕಿನ ಏಕತಾನತೆ, ಆಸರಿಕೆ, ಬೇಸರಿಕೆಗಳಿಂದ ಹೊರಬರಲು ಪ್ರಾಚೀನ ಜನರು ಕಂಡುಕೊಂಡ ವಿಧಾನವಿದು. ಈ ಪರಂಪರೆಯನ್ನು ಯಾರು ಬೆಳೆಸಿದರು, ಯಾವಾಗ ಬೆಳೆದು ಬಂತು ಎಂದು ಹೇಳುವುದು ಕಷ್ಟ. ಸಾಮಾನ್ಯವಾಗಿ ಹೇಳುವುದಾದರೆ ಸಾಮಾನ್ಯ ಜನರು, ಅದರಲ್ಲೂ ಅನಕ್ಷರಸ್ಥ ಜನರು ಅದನ್ನು ಬೆಳೆಸಿ–ಉಳಿಸಿಕೊಂಡು ಬಂದದ್ದು ಒಂದು ವಿಶೇಷ. ಜನಪದ ಪರಂಪರೆ ತುಂಬಾ ವಿಶಾಲವಾಗಿದ್ದು ಗ್ರಾಮೀಣ ಜನರ ಬದುಕಿನೊಂದಿಗೆ ಬೆಸೆದುಕೊಂಡು ಬಂದಿದೆ. ಮನುಷ್ಯ ಜೀವನದ ಸಾಂಸ್ಕೃತಿಕ ಆಚರಣೆಗಳಾದ ಹಬ್ಬ, ಜಾತ್ರೆ, ಮದುವೆ, ಉತ್ಸವ ಮೊದಲಾದ ಸಂದರ್ಭಗಳು ಈ ಪರಂಪರೆ ಹುಟ್ಟಿಗೆ ಕಾರಣವಾಗಿದೆ. ಹಾಗೆಯೇ ಆಧುನಿಕ ಪ್ರಭಾವವು ಜನಪದ ಪರಂಪರೆಯ ಮೇಲೆ ಹೇಗೆ ಆಗಿದೆ ಎಂಬುದನ್ನು ಪ್ರಸ್ತುತ ಲೇಖನ ತಿಳಿಸುತ್ತದೆ.

## KEYWORDS:

ಪ್ರಾಚೀನ ಪರಂಪರೆ, ಗ್ರಾಮೀಣ ಜನರ ಆಡುಮಾತಿನ ಸಾಹಿತ್ಯ, ಪರಂಪರೆ, ಜನಪದ ಪರಂಪರೆಯ ಲಕ್ಷಣಗಳು, ಜನಪದ ಪರಂಪರೆ ಪ್ರಕಾರಗಳು.

ಜನಪದ ಎಂದರೆ ಜನರಿಂದ ರಚಿತವಾದ ಹಾಡು, ಕತೆ, ಲಾವಣಿ, ಗಾದೆ, ಒಗಟು, ಜನಪದ ಕಲೆಗಳು ಮುಂತಾದವುಗಳು. ಜನಪದವು ಶ್ರೀಸಾಮಾನ್ಯನ ಅನುಭವ ಹಾಗೂ ಕ್ರಿಯೆಯೊಂದಿಗೆ ಸಹಜ ಸ್ಫೂರ್ತಿಯಿಂದ ಹೊರಹೊಮ್ಮಿದ ನುಡಿ ಮುತ್ತು. ಆಧುನಿಕ ಸೌಲಭ್ಯಗಳು ಲಭ್ಯವಿಲ್ಲದ ಕಾಲದಲ್ಲಿ ತಮ್ಮ ಆಸರಿಕೆ, ಬೇಸರಿಕೆಗಳನ್ನು ಕಳೆದುಕೊಳ್ಳುವ ಸಲುವಾಗಿ ತಮ್ಮ ಸಾಂಸ್ಕೃತಿಕ ಬದುಕಿನ ಹಿನ್ನೆಲೆಯಲ್ಲಿ ಮೂಡಿಬಂದ ಪರಂಪರೆ ಇದು. ಜನಪದ ಪರಂಪರೆಯು ಪ್ರಾಚೀನ

ಕಾಲದ ಸಾಹಿತ್ಯ ಪರಂಪರೆ. ಆಡುಮಾತಿನ ಸಾಹಿತ್ಯವಾಗಿರುವ ಇದು ಪೀಳಿಗೆಯಿಂದ ಪೀಳಿಗೆಗೆ ಬಾಯ್ದೆರೆಯಾಗಿ ಸಾಗಿ ಬಂದ ಪರಂಪರೆ. ಮನುಷ್ಯ ಎಷ್ಟು ಪ್ರಾಚೀನನೋ ಅಷ್ಟೇ ಪ್ರಾಚೀನವಾದದ್ದು ಜನಪದ ಪರಂಪರೆ. ಈ ಪರಂಪರೆ ಯಾವಾಗ, ಎಲ್ಲಿ, ಯಾರಿಂದ ಹುಟ್ಟಿಬಂದಿತು ಎಂಬುದಕ್ಕೆ ಯಾವುದೇ ಖಚಿತವಾದ ಆಧಾರಗಳು ನಮಗೆ ದೊರೆತಿಲ್ಲ. ಈ ಪರಂಪರೆಯು ಅನಾದಿಕಾಲದಿಂದಲೂ ಇಂದಿನವರೆಗೂ ಮನುಷ್ಯನಿಗೆ ಆನಂದವನ್ನು ಉಂಟುಮಾಡುತ್ತಾ ಬಂದಿದೆ. ಇದರೊಂದಿಗೆ ಬದುಕಿನ ಏಕತಾನತೆಯನ್ನು, ಆಸರಿಕೆ ಬೇಸರಿಕೆ ನಿವಾರಿಸಿಕೊಳ್ಳಲು ಶ್ರೀಸಾಮಾನ್ಯನ ಅನುಭವ ಹಾಗೂ ಕ್ರಿಯೆಯೊಂದಿಗೆ ಸಹಜ ಸ್ಫೂರ್ತಿಯಿಂದ ಹೊರಹೊಮ್ಮಿದ ನುಡಿಮುತ್ತಾಗಿದೆ. ಶಿಷ್ಟ ಸಾಹಿತ್ಯಕ್ಕೆ ಜನಪದ ಸಾಹಿತ್ಯ ಮೂಲ ಪ್ರೇರಣೆ. ಆದುದರಿಂದ ಬಿ. ಎಂ. ಶ್ರೀ ಯವರು ಇದನ್ನು "ಜನವಾಣಿ ಬೇರು, ಕವಿವಾಣಿ ಹೂವು" ಎಂದು ಕರೆದಿರುವುದು.

ಜನಪದ ಪರಂಪರೆಯಲ್ಲಿ ಹಲವು ಪ್ರಕಾರಗಳಿದ್ದು ಗೀತೆಗಳಿಗೆ ಅಗ್ರಸ್ಥಾನವಿದೆ. ಇವುಗಳಲ್ಲದೆ ಕತೆ, ಗಾದೆ, ಒಗಟು, ಲಾವಣಿಗಳೂ ಇವೆ. ಇವೆಲ್ಲವುಗಳನ್ನು ಒಳಗೊಂಡಿರುವುದೇ ಜನಪದ ಪರಂಪರೆ. ಇದು ಪರಂಪರಾನುಗತವಾಗಿ ಬಾಯ್ದೆರೆಯಿಂದಲೇ ಮೌಖಿಕವಾಗಿ ಹರಿದುಬಂದ ಸಾಹಿತ್ಯ. ಅದರಲ್ಲೂ ಗ್ರಾಮೀಣ ಜನರ ಬದುಕಿನೊಂದಿಗೆ ಉಳುಮೆ, ಬಿತ್ತನೆ, ಕಟಾವು, ಸುಗ್ಗಿ ಹಾಗೆಯೇ ಬೀಸುವಾಗ, ಕುಟ್ಟುವಾಗ ಹೀಗೆ ಜೀವನದಲ್ಲಿ ಇವು ಹಾಸುಹೊಕ್ಕಾಗಿ ಜೀವನದ ಒಂದು ಭಾಗವಾಗಿ ಇಂದಿನವರೆಗೂ ಸಾಗಿಬಂದು ಜನಮಾನಸದಲ್ಲಿ ಉಳಿದಿದೆ. ಇದು ಆಡುಮಾತಿನ ಶ್ರೀಸಾಮಾನ್ಯನ ಸಾಹಿತ್ಯ ಪರಂಪರೆಯಾಗಿದೆ. ಇದರಲ್ಲಿ ಜನರ ಮೌಖಿಕ ಆಚರಣೆಗಳೂ ತಲತಲಾಂತರದಿಂದ ನೈತಿಕ ಹಿನ್ನೆಲೆಯಲ್ಲಿ ಸಾಗಿಬಂದ ಸಾಂಸ್ಕೃತಿಕ ಆಚರಣೆಗಳು ಇವೆ.

**ಜನಪದ ಪರಂಪರೆಯ ಲಕ್ಷಣಗಳು:**

**1. ಜನಪದವು ಮೌಖಿಕವಾದುದು ಮತ್ತು ಪರಂಪರೆಯಿಂದ ಸಾಗಿಬಂದಿರುವುದು:**

ಜನಪದ ಪರಂಪರೆಯು ಮಾನವ ಜೀವನದ ಅವಿಭಾಜ್ಯ ಅಂಗವಾಗಿದ್ದು ಇದು ಮೌಖಿಕವಾಗಿ ಬಾಯಿಂದ ಬಾಯಿಗೆ ಯಾವುದೇ ಲಿಖಿತ ದಾಖಲೆಗಳಿಲ್ಲದೆ ಬಾಯ್ದೆರೆಯಾಗಿ, ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ, ಅಂದಿನಿಂದ ಇಂದಿನವರೆಗೆ ಸಾಗಿಬಂದಿದೆ. ಉದಾಹರಣೆಗೆ: ಹಾಡುಗಳು, ನೃತ್ಯಗಳು, ಆಚರಣೆಗಳು, ಕತೆಗಳು ಮುಂತಾದವು.

**2. ಸಾಮೂಹಿಕವಾದ ಮತ್ತು ಜನಪ್ರಿಯತೆ ಗಳಿಸಿರುವುದು:**

ಈ ಪರಂಪರೆಯ ಆಚರಣೆಗಳು ಸಾಮೂಹಿಕವಾದವು. ಎಲ್ಲ ಜನರು ಸೇರಿ ಆಚರಿಸುವ ಸಾಂಸ್ಕೃತಿಕವಾದವುಗಳು ಹಾಗೂ ಎಲ್ಲ ಜನರಿಗೂ ಸಂತಸ ತರುವಂತಹವುಗಳಾಗಿವೆ. ಉದಾಹರಣೆಗೆ: ನೃತ್ಯಗಳು, ಸಾಮೂಹಿಕ ಕುಣಿತಗಳು, ಹಬ್ಬಗಳ ಆಚರಣೆಗಳು.

**3. ಜೀವಂತಿಕೆ ಹಾಗೂ ಪರಿವರ್ತನೆಗೆ ಒಳಪಟ್ಟಿರುವುದು:**

ಜನಪದ ಪರಂಪರೆ ಸಾವಿರಾರು ವರ್ಷಗಳಿಂದ ಇಂದಿನವರೆಗೂ ಉಳಿದು ಬಂದ ಪರಂಪರೆ. ಅವು ಬಾಯ್ದೆರೆಯಾಗಿ ಗತಕಾಲದಿಂದ ಇಂದಿನವರೆಗೂ ಉಳಿದು ಬೆಳೆದು ಬಂದಿವೆ. ಮತ್ತು ಈ ಪರಂಪರೆ ಕಾಲಕ್ಕೆ ತಕ್ಕಂತೆ ಪರಿವರ್ತನೆ ಹೊಂದಿ ರೂಪಾಂತರ ಹೊಂದಿವೆ. ಉದಾಹರಣೆಗೆ: ಪ್ರಾಚೀನ ಹಾಡುಗಳು, ಇಂದಿನ ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದಿ ಆಧುನಿಕತೆಗೆ ಒಳಗಾಗಿವೆ.

**4. ಸರ್ವವ್ಯಾಪಿಯಾಗಿರುವುದು:**

ಜನಪದ ಪರಂಪರೆಯು ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿದೆ. ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯಾಗಿ ಪರಿವರ್ತನೆಯಾಗಿ ರೂಪಾಂತರಗೊಂಡು ಎಲ್ಲಾ ಕಡೆ ಇದು ಹರಡಿರುವುದು ವಿಶೇಷ. ಉದಾಹರಣೆಗೆ: ವೀರಗಾಸೆ, ಡೊಳ್ಳುಕುಣಿತ, ಕಂಸಾಳೆ, ಯಕ್ಷಗಾನ ಇವು ಎಲ್ಲವೂ ಜನಪದ ಪರಂಪರೆಯ ಕಲೆಗಳೇ. ಇವು ಆಯಾ ಪ್ರದೇಶಕ್ಕೆ ತಕ್ಕಂತೆ ಎಲ್ಲಾ ಕಡೆ ಹರಡಿವೆ.

**5. ಸರಳತೆ ಹಾಗೂ ಸ್ಪಷ್ಟ ಸುಶ್ರಾವ್ಯವಾದವು:**

ಈ ಪರಂಪರೆಯ ಹಾಡು, ನೃತ್ಯ, ಕಲೆಗಳು ಸರಳವಾಗಿ ಜನಸಾಮಾನ್ಯರು ಹಾಡುವ ಧಾಟಿಯಲ್ಲಿದ್ದು, ಸುಲಭವಾಗಿ ಹಾಡಲು ಸಹಾಯವಾಗಿವೆ ಮತ್ತು ಉತ್ತಮವಾದ ರಾಗ, ತಾಳಗಳಿಗೆ ಹೊಂದಿಕೆಯಾಗುವಂತೆ ಇವೆ. ಉದಾಹರಣೆಗೆ: ಜನಪದಗೀತೆಗಳು, ಲಾವಣಿ ಪದಗಳು.

**ಜನಪದ ಪರಂಪರೆಯ ಪ್ರಕಾರಗಳು:**

ಜನಪದ ಪರಂಪರೆಯಲ್ಲಿ ಇಂತಿಷ್ಟೇ ಪ್ರಕಾರ ಎಂದು ಹೇಳುವುದು ಕಷ್ಟ. ಇದರಲ್ಲಿ ಹಲವು ಪ್ರಕಾರಗಳಿದ್ದು ಅವುಗಳನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು: ಜನಪದಗೀತೆಗಳು, ಮೌಖಿಕ ಸಂಪ್ರದಾಯ ಕಥೆಗಳು, ಲಾವಣಿಗಳು, ಗಾದೆಗಳು, ಒಡಪುಗಳು, ಕೆಲವು ಸಂಪ್ರದಾಯದ ಆಚರಣೆಗಳು, ಕಂಸಾಳೆ ಪದ, ಗೀಗೀ ಪದ, ಕೋಲಾಟದ ಪದಗಳು, ಸೋಬಾನೆ ಪದಗಳು, ಬೀಸುವ ಕಲ್ಲಿನ ಹಾಡುಗಳು, ಸುಗ್ಗಿ ಹಾಡುಗಳು, ಜನಪದ ಕಲೆಗಳು, ಕುಣಿತಗಳು ಮೊದಲಾದವುಗಳು.

**ಜನಪದ ವೃತ್ತಿ ಕಲೆಗಳು ಮತ್ತು ಕಲಾವಿದರು:**

**ಡಾ. ಜಿ. ಶಂ. ಪ. ರವರು ಈ ಕೆಳಗಿನಂತೆ ವರ್ಗೀಕರಿಸಿದ್ದಾರೆ:**

1. ಮೇಳ ವೃತ್ತಿ ಕಲಾವಿದರು.
2. ಮನೋರಂಜಕ ವೃತ್ತಿ ಕಲಾವಿದರು.
3. ಧಾರ್ಮಿಕ ವೃತ್ತಿ ಕಲಾವಿದರು.
4. ಭವಿಷ್ಯ ವೃತ್ತಿ ಕಲಾವಿದರು.
5. ಕುಣಿತ ಪ್ರಧಾನ ಕಲೆಗಳು, ಕಲಾವಿದರು.
6. ಇತರ ಕಲಾವಿದರು.

**1. ಮೇಳ ವೃತ್ತಿ ಕಲಾವಿದರು:**

1. ಚೌಡಿಕೆಯವರು 2. ಗೊಂದಲಿಗರು 3. ಗೊರವರು.

**2. ಮನೋರಂಜಕ ವೃತ್ತಿ ಕಲಾವಿದರು:**

ಈ ಜನಪದ ಕಲಾವಿದರು ಮನೋರಂಜನೆ ನೀಡುವ ಮೂಲಕ ಜನರು ಕೊಟ್ಟಿದ್ದನ್ನು ಸ್ವೀಕರಿಸುತ್ತಾರೆ. ಮೂಲತಃ ಇವರು ಅಲೆಮಾರಿಗಳು, ಭಿಕ್ಷೆಬೇಡಿ ಜೀವನ ಸಾಗಿಸುವವರು. ಅವರುಗಳೆಂದರೆ: ವೇಶಗಾರರು, ಕವಲೆತ್ತಿನವರು, ದೊಂಬರು, ಮೋಡಿಕಾರರು, ಮೊಂಡರು.

**3. ಧಾರ್ಮಿಕ ವೃತ್ತಿ ಕಲಾವಿದರು:**

ಈ ಬಗೆಯ ಜನಪದ ಕಲಾವಿದರು ದೇವತಾರಾಧನೆ ಮಾಡಿ ಧಾರ್ಮಿಕ ಶ್ರದ್ಧೆಯಿಂದ ಕಲಾವೃತ್ತಿ ಮಾಡುತ್ತಾರೆ. ಅವರೆಂದರೆ: 1. ದುರುಗಮುರಿಗಿ 2. ಸುಡುಗಾಡು ಸಿದ್ಧರು 3. ಮುಳ್ಳಾವಿಗೆಯವರು 4. ದಾಸಯ್ಯಗಳು.

**4. ಭವಿಷ್ಯವಾಚಕ ವೃತ್ತಿ ಕಲಾವಿದರು:**

ಈ ರೀತಿ ಜನಪದರು ಜನರಿಗೆ ಭವಿಷ್ಯ ಹೇಳುತ್ತಾ ಕಲೆಯನ್ನು ಪ್ರದರ್ಶಿಸಿಕೊಂಡು ಭವಿಷ್ಯ ನುಡಿಯುತ್ತಾ ದೇವರನ್ನು ನಂಬಿಕೊಂಡು ಹಳ್ಳಿಗರಿಗೆ ಭವಿಷ್ಯ ಹೇಳುವವರಾಗಿದ್ದಾರೆ. ಅವರುಗಳೆಂದರೆ: 1. ಕೊರವಂಜಿಗಳು 2. ಕರ್ರಮಾಮಾಗಳು 3. ಸಾರುವಯ್ಯನವರು.

**5. ಕುಣಿತ ಪ್ರಧಾನ ಜನಪದ ವೃತ್ತಿ ಕಲಾವಿದರು:**

ಈ ಬಗೆಯ ಜನಪದರು ಕುಣಿತಗಳನ್ನು ಮಾಡುತ್ತ ಜನಪದ ಗೀತೆಗಳನ್ನು ಹಾಡುತ್ತಾರೆ. ಇದು ಅವರಿಗೆ ವೃತ್ತಿಯೂ ಆಗಿರುತ್ತದೆ. ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಯಾವುದೇ ಜಾತಿ ಭೇದವಿಲ್ಲದೆ ಈ ತಂಡಗಳು ಕುಣಿತದ ಕಲಾ ಪ್ರದರ್ಶನ ಮಾಡುತ್ತಾರೆ. ಅವರೆಂದರೆ: 1. ಡೊಳ್ಳಿನವರು 2. ಪುರವಂತಿಕೆಯವರು 3. ಪಂಡರಿ ಭಜನೆಯವರು.

**6. ಇತರ ಕಲಾವಿದರು:**

ಕೆಲವು ಜನಪದರು ಅರೆವೃತ್ತಿ ಕಲಾವಿದರಾಗಿ ಈ ವೃತ್ತಿ ಮಾಡುತ್ತಾ, ಹವ್ಯಾಸಿ ಕಲಾವಿದರಾಗಿ ಸಂದರ್ಭಾನುಸಾರ ಈ ವೃತ್ತಿ ಮಾಡುತ್ತಿರುತ್ತಾರೆ. ಅವರುಗಳೆಂದರೆ: ಹೆಳವರು, ಶಿಳ್ಳೆಕೇತರು, ಹಾವಾಡಿಗರು, ಕಹಳೆಯವರು, ತಂಬೂರಿಯವರು, ದೇವರದಾಸಿಯವರು, ಲಾವಣಿಕಾರರು, ಭಜನೆಯವರು – ಹೀಗೆ ಇನ್ನೂ ಅನೇಕ ಬಗೆಯ ಗುಂಪು ಕಲಾವಿದರಿದ್ದಾರೆ.

**ಜನಪದ ಪ್ರದರ್ಶನ ಕಲೆಗಳು:**

ಇವು ಪ್ರದರ್ಶನ ಮಾಡುವ ಕಲೆಗಳಾಗಿವೆ. ಅವುಗಳೆಂದರೆ: ದೊಡ್ಡಾಟ,

ಸಣ್ಣಾಟ, ಯಕ್ಷಗಾನ, ದಾಸರಾಟ, ಕೃಷ್ಣಪಾರಿಜಾತ, ತೊಗಲುಗೊಂಬೆಯಾಟ, ಸೂತ್ರದ ಗೊಂಬೆಯಾಟ, ಮೂಡಲಪಾಯ ಯಕ್ಷಗಾನ, ಮೋಡಿ ಆಟ, ಹಗರಣ, ಕೈತಲೆ ಆಟ, ಕೊಂಬಾಟ್, ಬೋಳುಕಾಟ್, ಕೋಲಾಟ, ಜಡೆಕೋಲಾಟ, ಕೊರವಂಜಿ ಕುಣಿತ, ಕಾಡ್ಯ ನಾಟ.

**ಕುಣಿತಗಳು:**

ಕರಡಿಕುಣಿತ, ಕೋತಿಕುಣಿತ, ಕೋಡಂಗಿಕುಣಿತ, ಗೇರುಕಳ್ಳ ಕುಣಿತ, ಗಾರುಡಿಗೊಂಬೆ ಕುಣಿತ, ಗೊರವರ ಕುಣಿತ, ಡಿಕಾಂಬರಿ ಕುಣಿತ, ಡೊಳ್ಳುಕುಣಿತ, ತಮಟೆಕುಣಿತ, ನಂದಿಕೋಲು ಕುಣಿತ, ಪಟದ ಕುಣಿತ, ಪೂಜಾಕುಣಿತ, ವೀರಗಾಸೆ, ವೀರಭದ್ರನ ಕುಣಿತ, ವೀರಮಕ್ಕಳ ಕುಣಿತ, ಸೋಮನ ಕುಣಿತ, ಗೊಂದಲಿಗರ ಮೇಳ, ಚೌಡಮ್ಮನ ಕುಣಿತ, ಭೂತೇಶ ಕುಣಿತ, ಮಾರಮ್ಮನ ಕುಣಿತ, ರಿವಾಯತ್ ಕುಣಿತ, ಲಾವಣಿ, ಮದಿಮ್ಮಯ ಕುಣಿತ, ಮರಗಾಲು ಕುಣಿತ, ಜೋಗತಿ ಕುಣಿತ, ಮಂಕಾಳಿ ಕುಣಿತ, ತಾರ್ಲೆ ಕುಣಿತ, ತಾಳಮದ್ದಲೆ, ಸಿಂಹನೃತ್ಯ, ಕೊರಗರ ಕುಣಿತ, ಅಲಾವಿ ಕುಣಿತ, ಹೀಗೆ ನೂರಾರು ಜನಪದ ಪರಂಪರೆ ಕುಣಿತಗಳಿವೆ.

**ಜನಪದ ಪರಂಪರೆಯ ಮೇಲೆ ಆಧುನಿಕ ಪ್ರಭಾವಗಳು:**

ಇಂದು ಎಲ್ಲಾ ಕ್ಷೇತ್ರಗಳಲ್ಲಿಯೂ ಆಧುನಿಕತೆ ಪ್ರಭಾವಗಳು ಕಂಡುಬರುವಂತೆ ಜನಪದ ಪರಂಪರೆ ಮೇಲೂ ಪ್ರಭಾವ ಬೀರಿರುವುದನ್ನು ಕಾಣಬಹುದು. ಶಿಕ್ಷಣ ಮತ್ತು ಜಾಗತೀಕರಣದ ಪರಿಣಾಮವಾಗಿ ಜನಪದ ಪರಂಪರೆ ಸಾಕಷ್ಟು ಬದಲಾವಣೆ ಕಂಡಿದೆ. ಮೂಲ ಜಾನಪದ ಪಾರಂಪರಿಕ ಗೀತೆಗಳು ಇಂದು ಚಲನಚಿತ್ರಗಳಲ್ಲಿನ ಹಾಡುಗಳಾಗಿ ಪ್ರಸಿದ್ಧಿ ಪಡೆದಿವೆ. ಎಷ್ಟೋ ಸಂದರ್ಭಗಳಲ್ಲಿ ಪಾರಂಪರಿಕವಾದ ಮೂಲ ಜನಪದ ಹಾಡು, ನೃತ್ಯಗಳು ಆಧುನಿಕತೆ ಪ್ರಭಾವದಿಂದಾಗಿ ನಾಶವಾಗುತ್ತವೆ.

ಉದಾಹರಣೆಗೆ: ಗೀಗಿಪದ, ಚೌಡಿಕೆಪದ ಮೊದಲಾದ ಜಾನಪದಗಾರರು ಹಾಗೂ ಆ ಸಾಹಿತ್ಯ ಪರಂಪರೆ ನಶಿಸುತ್ತಿದ್ದು ಇಲ್ಲವಾಗುತ್ತಿವೆ.

ಶಿಕ್ಷಣದ ಪ್ರಭಾವದಿಂದಾಗಿ ವಂಶಪಾರಂಪರ್ಯವಾಗಿ ಬಂದ ಈ ಪರಂಪರೆ ಇಂದು ವಿನಾಶದ ಅಂಚಿನಲ್ಲಿ ಸಾಗಿದೆ. ಜೊತೆಗೆ ಅನೇಕ ಜನಪದ ಕಲೆಗಳು ರೂಪಪರಿವರ್ತನೆ ಹೊಂದಿ ಆಧುನಿಕತೆ ಪ್ರಭಾವದಿಂದಾಗಿ ಹೊಸರೂಪವನ್ನು ಪಡೆದಿವೆ.

ಉದಾಹರಣೆಗೆ: ಕೆಲವು ಜನಪದ ನಾಟಕಗಳಲ್ಲಿ ಆಧುನಿಕ ಹಾಡುಗಾರಿಕೆ, ರಂಗಸಜ್ಜಿಕೆ, ಸಂಗೀತ ಮೊದಲಾದವು ಸೇರ್ಪಡೆಯಾಗಿ ಜನಪದ ಸಂಸ್ಕೃತಿಗೆ ಹೊಸ ಮೆರಗು ಸಿಕ್ಕಿದೆ. ಆಧುನಿಕತೆ ಪ್ರಭಾವದಿಂದ ನಮ್ಮ ಜನಪದ ಹಾಡು ನೃತ್ಯ ಕಲೆಗಳಿಗೆ ಪಾಶ್ಚಾತ್ಯ ದೇಶಗಳಲ್ಲಿಯೂ ಸ್ಥಾನ ದೊರೆತಿದೆ. ನಗರೀಕರಣದಿಂದಾಗಿ ಹಳ್ಳಿಗಳಲ್ಲಿ ಬೆಳೆದಿದ್ದ ಈ ಪರಂಪರೆ ನಶಿಸುತ್ತಿದ್ದರೆ ನಗರಗಳಲ್ಲಿ ಈ ಬಗ್ಗೆ ತರಬೇತಿ ಕೊಡುವ, ರಕ್ಷಿಸುವ ಅವಕಾಶ ದೊರೆತಿದೆ.

**ಜನಪದ ಪರಂಪರೆ ಉಳಿವಿಗಾಗಿ ಕೈಗೊಳ್ಳಬೇಕಾದ ಕ್ರಮಗಳು:**

ಎಷ್ಟೋ ಜನಪದ ಪರಂಪರೆಯ ಹಾಡು, ನೃತ್ಯ, ನಾಟಕ ಕಲೆಗಳು ಆಧುನಿಕ ಪ್ರಭಾವಕ್ಕೆ ಸಿಕ್ಕಿ ನರಳುತ್ತಿರುವಾಗ ಈ ಸಂಸ್ಕೃತಿಯ ಪರಂಪರೆಯನ್ನು ಉಳಿಸುವುದು ಅವಶ್ಯಕವಾಗಿದೆ.

- ಗ್ರಾಮೀಣ ಈ ಕಲೆಗೆ ಸರ್ಕಾರದಿಂದ ಮಾನ್ಯತೆ ದೊರೆಯುವಂತಾಗಬೇಕು.
- ನಗರ/ಹಳ್ಳಿಗಳಲ್ಲಿ ಈ ಪರಂಪರೆಯ ಹಾಡು, ನೃತ್ಯಕಲಾ ಪ್ರದರ್ಶನಕ್ಕೆ ಅವಕಾಶ ಒದಗಿಸಬೇಕು.
- ಪ್ರಾಥಮಿಕ ಹಂತದಿಂದ ಪದವಿ ಹಂತದವರೆಗೂ ಒಂದಿಲ್ಲೊಂದು ಜನಪದ ವಿಚಾರ ಪಠ್ಯದಲ್ಲಿ ಸೇರ್ಪಡೆ ಮಾಡಬೇಕು.
- ವಿಶೇಷವಾಗಿ ಜನಪದ ಕಲಾವಿದರಿಗೆ ಸರ್ಕಾರ ವಿಪುಲ ಅವಕಾಶ ನೀಡಿ ಪ್ರತಿವರ್ಷ ಈ ಕಲಾಪ್ರದರ್ಶನಕ್ಕೆ ಅವಕಾಶ ಕಲ್ಪಿಸಬೇಕು.
- ಸರ್ಕಾರದಿಂದಲೇ ಹಳ್ಳಿಹಬ್ಬ, ಜನಪದ ಕಲಾಮೇಳ, ಕೃಷಿಹಬ್ಬ ಮುಂತಾದ ಜನಪದ ಕಲೆಗಳಿಗೆ ಅವಕಾಶ ಕಲ್ಪಿಸಿಕೊಡಬೇಕು.

ಹೀಗೆ ಹತ್ತಾರು ಕಾರ್ಯಕ್ರಮ ಕೈಗೊಂಡು ಜನಪದ ಪರಂಪರೆಯನ್ನು ಉಳಿಸಿ ಬೆಳೆಸುವ ಹಾಗೂ ಮುಂದಿನ ತಲೆಮಾರಿಗೆ ಈ ಸಂಸ್ಕೃತಿಯನ್ನು ಕೊಂಡೊಯ್ಯುವ ಪ್ರಯತ್ನ ಎಲ್ಲರದ್ದಾಗಬೇಕು.

**ಪರಾಮರ್ಶನ ಗ್ರಂಥಗಳು:**

1. ಜವರೇಗೌಡ ದೇ., (1976), ಜಾನಪದ ಅಧ್ಯಯನ, ಮೈಸೂರು: ಡಿ.ವಿ.ಕೆ. ಮೂರ್ತಿ.
2. ಪರಮಶಿವಯ್ಯ ಜಿ.ಶಂ., (1979), ಜನಪದ ಸಾಹಿತ್ಯ ಸಮೀಕ್ಷೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
3. ರಾಮಚಂದ್ರಗೌಡ ಹಿ.ಶಿ., (2006), ಕನ್ನಡ ಜನಪದ ಸಾಹಿತ್ಯ ಪ್ರಕಾರಗಳು, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
4. ಹಲಸಂಗಿ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ, (1931), ಗರತಿಯ ಹಾಡು, ಧಾರವಾಡ: ಸಮಾಜ ಪುಸ್ತಕಾಲಯ.
5. ಚಿಕ್ಕೆರೆ ಶಿವಶಂಕರ್, (2005), ಜಾನಪದ ಪ್ರವೇಶ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.